**O.S. No.516/2022.DW-1.**

**ದಿನಾಂಕಃ04.07.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

<u>**ಪಾಟೀ ಸವಾಲುಃ**</u> ವಾದಿಯರ ಪರ ಶ್ರೀ ಜಿ ಹೆಚ್ ಕೆ ವಕೀಲರಿಂದಃ-

ಗೋವಿಂದಪ್ಪ ನನ್ನ ಅಣ್ಣ ಎಂದರೆ ಸರಿ. ನಾನು ಮನೆ ಮತ್ತು ನಿವೇಶನವನ್ನು 1992 ರಲ್ಲಿ ತಿಮ್ಮಕ್ಕರವರಿಂದ ನನ್ನ ಅಣ್ಣ ಗೋವಿಂದಪ್ಪರವರ ಹೆಸರಿಗೆ ಖರೀದಿಸಿರುತ್ತೇನೆ. ನಾನು ಆಸ್ತಿ ಖರೀದಿ ಮಾಡುವಾಗ ಅದರ ಅಸೆಸ್ ಮೆಂಟ್ ಸಂಖ್ಯೆ 5, ಖಾತಾ ನಂ.117 ವಿಸ್ತೀರ್ಣ 15 X 20 ಅಡಿ ಹಾಗೇಯೇ ಅಸೆಸ್ ಮೆಂಟ್ 6 ವಿಸ್ತೀರ್ಣ 25 X 30 ಅಡಿ ಒಟ್ಟು 40 X 50 ಅಡಿ ವಿಸ್ತೀರ್ಣದ ಜಮೀನು ಖರೀದಿ ಮಾಡಿರುತ್ತೇವೆ ಎಂದರೆ ಸರಿ. ನಾನು ಮತ್ತು ನನ್ನ ಅಣ್ಣ ಸದರಿ ಆಸ್ತಿಯನ್ನು 2004-05 ರಲ್ಲಿ ಒಗ್ಗೂಡಿಸಿಕೊಂಡು ಅಸೆಸ್ ಮೆಂಟ್ ನಂ.115 ವಿಸ್ತೀರ್ಣ 40 X 50 ಅಡಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ 4 ರಂತೆ 2004-05 ರಲ್ಲಿ ನಾನು ಅಸೆಸ್ ಮೆಂಟ್ ನಂ.115 ನ್ನು ಒಟ್ಟುಗೂಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು 2006 ರಲ್ಲಿ ಮನೆಕಟ್ಟಿರುತ್ತೇನೆ. ಆಗ ನಾನು ಗ್ರಾಮ ಪಂಚಾಯಿತಿಯಿಂದ ಪರವಾನಗೆ ಪಡೆದುಕೊಂಡಿರುವುದಿಲ್ಲ. ನನ್ನ ಮನೆಯನ್ನು ವಿಸ್ತೀರ್ಣ 40 X 50 ಅಡಿ ರಲ್ಲಿ ಕಟ್ಟಿರುತ್ತೇನೆ. ನನ್ನ ತಕರಾರಿನಲ್ಲಿಯೂ ಸಹಃ ವಿಸ್ತೀರ್ಣ 40 X 50 ಅಡಿ ರಲ್ಲಿ ಮನೆ ಕಟ್ಟಿರುತ್ತೇನೆ ಎಂದು ಬರೆದಿರುತ್ತೇನೆ. ನಿಡಿ 4 ರಂತೆ ಆಸ್ತಿಯ ವಿಸ್ತೀರ್ಣ 40 X 50 ಅಡಿ ಎಂದು ಇದೆ ಎಂದರೆ ಸರಿ. ನಾನು ಮೇಲೆ ಹೇಳಿದ ಎರಡು ನಿವೇಶನಗಳನ್ನು ನನ್ನ ಅಣ್ಣನಿಂದ ಕ್ರಯ ಮಾಡಿಸಿಕೊಂಡಿರುವುದಿಲ್ಲ. ನಾನು ನನ್ನ ತಕರಾರಿನಲ್ಲಿ ನನ್ನ ಅಣ್ಣನಿಂದ ಎರಡು ಮನೆಗಳನ್ನು ನಾನು ಖರೀದಿಸಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ನಮ್ಮ ಮನೆಯ ಪೂರ್ವಕ್ಕೆ ವಾದಿಯ ಜಮೀನು ಇದೆ. ವಾದಿಯ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನಮ್ಮ ಮನೆಯ ಹಿಂಬದಿಯಲ್ಲಿ ರಸ್ತೆ ಇದೆ, ಸದರಿ ರಸ್ತೆಯಾದ ನಂತರ ದುಗ್ಗಪ್ಪ ಮತ್ತು ರಂಗನಾಥ ರವರ ಮನೆ ಇದೆ. ಸದರಿ ರಸ್ತೆ ನಮ್ಮ ಮನೆಯ ದಕ್ಷಿಣಕ್ಕೆ ಇದೆ. ವಾದಿಗಳು ಅವರ ಜಮೀನನ್ನು 2004 ಮತ್ತು 2018-19 ರಲ್ಲಿ ಸರ್ವೆ ಮಾಡಿಸಿದಾಗ ಸರ್ವೆಯರ್ ನಾವು ಅವರ 10 ಅಡಿ ಜಾಗವನ್ನು ಒತ್ತುವರಿ ಮಾಡಿರುತ್ತೇವೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಅನುಮತಿ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.